ದಿನಾಂಕ 07−07−2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಿ.ಪಿ.19 ರ ದಾಖಲೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಗೆ ನಿ.ಪಿ.19 ರ ದಾಖಲೆಯನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.19(ಬಿ) ಎಂದು ಗುರುತಿಸಲಾಯಿತು. ನಿ.ಪಿ.19 ಕ್ಕೆ ನಾನು 8 ವರ್ಷಗಳ ಹಿಂದೆ ಪೊಲೀಸು ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನಿ.ಪಿ.19 ರಲ್ಲಿ ನಮೂದಿಸಿರುವಂತೆ ನನ್ನ ಸಮಕ್ಷಮ ಪೊಲೀಸರು ಯಾವುದೇ ಸ್ವತ್ತನ್ನು ತಮ್ಮ ವಶ ಪಡೆದಿಲ್ಲ. ನಿ.ಪಿ.19 ರಲ್ಲಿ ನಮೂದಿಸಿರುವ ಅಂಶಗಳು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆ ಮೇರೆಗೆ ನಿ.ಪಿ.19 ಕ್ಕೆ ಸಹಿ ಮಾಡಿದ್ದೇನೆ. ಆರೋಪಿತರು ನನಗೆ ಗೊತ್ತಿಲ್ಲ. ಘಟನೆ ಸಂಬಂಧ ಯಾವುದೇ ಹೇಳಿಕೆಯನ್ನು ಪೊಲೀಸರಿಗೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಬೇಕೆಂದು ಕೋರಿದ್ದು , ವಾದವನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಿದ ನಂತರ ಸದರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾ.ಸಾ.1 ರವರಿಗೆ ಸೇರಿದ ಆಲರ್ಪದವಿನಲ್ಲಿರುವ ಅಂಗಡಿಯಿಂದ ಕಾಳುಮೆಣಸು ಕಳ್ಳತನವಾಗಿತ್ತು ಎಂದರೆ ಕೇಳಿ ಗೊತ್ತಿದೆ ಎಂದು ನುಡಿಯುತ್ತಾರೆ. ದಿನಾಂಕ 13-10-2017 ರಂದು ನನ್ನನ್ನು ಮತ್ತು ಚಾ.ಸಾ.9 ರವರನ್ನು ಪುತ್ತೂರು ಗ್ರಾಮಾಂತರ ಪೊಲೀಸರು ಆರ್ಯಾಪು ಗ್ರಾಮದ ಕುಂಜೂರುಪಂಜ ಎಂಬಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿ ಒಂದು ಇನೋವಾ ಕಾರು ಸಂಖ್ಯೆ ಕೆಎ19-ಎಂಪಿ-0007 ಮತ್ತು ಬೊಲೋರೋ ಜೀಪು ಸಂಖ್ಯೆ ಕೆಎ-38-6832 ನಿಲ್ಲಿಸಿ ಪರಿಶೀಲಿಸಿದಾಗ, ಇನೋವಾ ಕಾರ್‍ನಲ್ಲಿ 1 ಮತ್ತು 4ನೇ ಆರೋಪಿಗಳು ಇದ್ದು ಅದರ ಹಿಂದೆ 8 ಗೋಣಿ ಚೀಲಗಳು ಇದ್ದು 50 ಕೆ.ಜಿ ತೂಕದ ಕಾಳು ಮೆಣಸು ಇತ್ತು ಹಾಗೂ ಬೊಲೋರೋ ಜೀಪಿನಲ್ಲಿ 2 ಮತ್ತು 3ನೇ ಆರೋಪಿತರು ಇದ್ದು ಆ ಜೀಪಿನಲ್ಲಿ 7 ಗೋಣಿ ಚೀಲಗಳು ಇದ್ದು ತಲಾ 50 ಕೆ.ಜಿಯಂತೆ ಕಾಳು ಮೆಣಸುಗಳು ಇತ್ತು, ಅದಕ್ಕೆ ಎ.ಕೆ.ಪಿ. ಎನ್ನುವ ಗುರುತು ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಸ್ಥಳಕ್ಕೆ ಚಾ.ಸಾ.1 ರವರು ಬಂದು ತಮ್ಮ ಅಂಗಡಿಯಲ್ಲಿ ಕಳ್ಳತನ ವಾಗಿದ್ದು ಕಾಳುಮೆಣಸನ್ನು ಗುರುತಿಸಿದ್ದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಪೊಲೀಸರು ಬೆಳಿಗ್ಗೆ 10.30-12.00 ಗಂಟೆಯ ವರೆಗೆ ನನ್ನ ಮತ್ತು ಚಾ.ಸಾ.9 ರವರ ಸಮಕ್ಷಮ ನಿ.ಪಿ.19 ರಂತೆ ಮಹಜರು ಬರವಣಿಗೆ

ಮಾಡಿದ್ದು ಆರೋಪಿಗಳನ್ನು ಹಾಗೂ ಸ್ವತ್ತುಗಳನ್ನು ತಮ್ಮ ವಶಪಡೆದರು ಎಂದರೆ ಸರಿಯಲ್ಲ. ಆಗ ನಾನು ನಿ.ಪಿ.19 ಕ್ಕೆ ಸ್ಥಳದಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸುಳ್ಳು.

ಅದೇ ದಿನ ಮಧ್ಯಾಹ್ನ 03.00-03.45 ರ ಸಮಯದಲ್ಲಿ 1ನೇ ಆರೋಪಿಯು ತೋರಿಸಿಕೊಟ್ಟ ಕಳ್ಳತನ ವಾಗಿದ್ದ ಸ್ಥಳದಲ್ಲಿ ಪೊಲೀಸರು ನನ್ನ ಹಾಗೂ ಚಾ.ಸಾ.9 ರವರ ಸಮಕ್ಷಮ ನಿ.ಪಿ.18 ರಂತೆ ಸ್ಥಳ ಮಹಜರನ್ನು ತಯಾರಿಸಿ ಸ್ಥಳದಲ್ಲಿಯೇ ನನ್ನ ಸಹಿಯನ್ನು ಪಡೆದರು ಎಂದರೆ ಸುಳ್ಳು. ಈ ಬಗ್ಗೆ ನಾನು ದಿನಾಂಕ 13-10-2018 ರಂದು ನನಗೆ ಓದಿ ಹೇಳಿದಂತೆ " ನಾನು ಹೇಳಿದ ವಿಳಾಸದಲ್ಲಿ - --------------------------- ----------------------- -------- ನಾನು ಸಹಿ ಹಾಕಿರುತ್ತೇನೆ '' ಎಂದು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೆನು ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.21 ಎಂದು ಗುರುತಿಸಲಾಯಿತು. ಆರೋಪಿಗಳನ್ನು ಶಿಕ್ಷೆಯಿಂದ ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಏನೂ ಇರುವುದಿಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿ, ಪುತ್ತೂರು ದ.ಕ.